**File NO.DPARAR/65/AAR/2020-DPARAR-TRG-DPAR AR**

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ (ಆಸು) 65 ಇಆಸು 2020

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು ದಿನಾಂಕ: 04-03-2021.

## ಸುತ್ತೋಲೆ

**ವಿಷಯ**: ರಾಜ್ಯ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ**: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ (ಆಸು) 65 ಇಆಸು 2020, ದಿನಾಂಕ:02-09-2020 ಮತ್ತು 03-11-2020.

*******

2020-21ನೇ ಸಾಲಿನಲ್ಲಿ ರಾಜ್ಯ, ಇಲಾಖಾ ಮತ್ತು ಜಿಲ್ಲಾ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ" ಪಡೆಯಲು ರಾಜ್ಯ ಸರ್ಕಾರದ ಅಧಿಕಾರಿ/ನೌಕರರು ತಮ್ಮ **ನಾಮನಿರ್ದೇಶನಗಳನ್ನು ಆನ್ಲೈನ್** ಮೂಲಕ ಸಲ್ಲಿಸುವ ಅವಕಾಶವನ್ನು ಉಲ್ಲೇಖಿತ ದಿನಾಂಕ:03-11-2020 ರ ಸುತ್ತೋಲೆಯಲ್ಲಿ ದಿನಾಂಕ:30-11-2020 ರವರೆಗೆ ವಿಸ್ತರಿಸಲಾಗಿತ್ತು.

ಸರ್ಕಾರವು ಪ್ರತಿ **ವರ್ಷ ಏಪ್ರಿಲ್ -21 ರಂದು ನಾಗರೀಕ ಸೇವಾ ದಿನವನ್ನು** ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯನ್ನಾಗಿ ಆಚರಿಸಲು ನಿರ್ಧರಿಸಿರುವುದರಿಂದ ಸದರಿ ದಿನದಂದೆ ಸರ್ವೋತ್ತಮ ಸೇವಾ ಪ್ರಶಸ್ತಿಗಳನ್ನು ಪ್ರದಾನ ಮಾಡಲು ತೀರ್ಮಾನಿಸಲಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯ, ಇಲಾಖಾ ಮತ್ತು ಜಿಲ್ಲಾ ಮಟ್ಟದ "ಸರ್ವೋತ್ತಮ ಸೇವಾ ಪ್ರಶಸ್ತಿ" ಪಡೆಯಲು ನಾಮನಿರ್ದೇಶನಗಳನ್ನು ಸಲ್ಲಿಸುವ **ಅವಧಿಯನ್ನು ಪುನ: ದಿನಾಂಕ:31-03-2021 ರ ವರೆಗೆ ವಿಸ್ತರಿಸಲಾಗಿದೆ.** ಸದರಿ ದಿನಾಂಕದ ನಂತರ ಬರುವ ನಾಮನಿರ್ದೇಶನಗಳನ್ನು ಸ್ವೀಕರಿಸಲಾಗುವುದಿಲ್ಲ.

ನಾಮನಿರ್ದೇಶನ ಸಲ್ಲಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ ಜಾಲತಾಣ **https://sarvothamaawards.karnataka.gov.in & https://dparar.karnataka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಜಾಲತಾಣದಲ್ಲಿ ಮಾಹಿತಿ/ವಿವರಗಳನ್ನು ದಾಖಲಿಸಲು ಯಾವುದೇ ರೀತಿಯ ಅಡಚಣೆ/ಸಂದೇಹ ಉಂಟಾದಲ್ಲಿ ಹೆಚ್ಚಿನ ಮಾಹಿತಿಗಾಗಿ ಈ ಕೆಳಕಾಣಿಸಿದ Helpdesk ಗೆ ದೂರವಾಣಿ ಮೂಲಕ ಸಂಪರ್ಕಿಸುವುದು.

ಶ್ರೀ ಮಂಜುನಾಥ್
ಮೊಬೈಲ್ ನಂ:9886670864
ದೂ:080-22230060
ಇ-ಮೇಲ್ ವಿಳಾಸ:developer-2webportal@karnataka.gov.in&
Pm-impl.eoffice&Karnataka.gov.in
(ಕಚೇರಿ ವೇಳೆಯಲ್ಲಿ ಮಾತ್ರ ಸಂಪರ್ಕಿಸುವುದು)

(ಬಿ.ಎಸ್. ರವಿಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಆಸು-ತರಬೇತಿ)

**ಇವರಿಗೆ:**

1.ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ
2.ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ
3.ಎಲ್ಲಾ ಜಿಲ್ಲಾಧಿಕಾರಿಯವರಿಗೆ
4.ಎಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ
5.ಕಚೇರಿ ಪ್ರತಿ/ಹೆಚ್ಚುವರಿ ಪ್ರತಿ